ಹೀಗಿರುವಾಗ ಹೊಸ ಹುಡುಗನಿಗೆ ಐಪಿಎಲ್ ವೀಳ್ಯ ಸಿಗುವುದು ಅಚ್ಚರಿಯೇ ಹೌದು.

ವಿಘ್ನೇಶ್ ಇದೀಗ 'ನಿಗೂಢ ಸ್ಪಿನ್ನರ್' ಎಂದು ಗುರುತಾಗಿದ್ದಾರೆ. ಜೋರಾಗಿ ಓಡೋಡಿ ಬಂದು ನಿಧಾನಗತಿಯಲ್ಲಿ ಎಸೆತಗಳನ್ನು ಹಾಕುವ ಅವರ ಶೈಲಿ ಸದ್ಯದ ಸಿದ್ಧ ಎಡಗೈ ಸ್ಪಿನ್ನರ್‌ಗಳ ಮಾದರಿಗೆ ಹೊರತಾದುದು. ವಿಶ್ವವಿಖ್ಯಾತ ಸ್ಪಿನ್ನರ್‌ಗಳೆಲ್ಲ ನಿಧಾನಗತಿಯಲ್ಲಿ, ತುಸುವೇ ದೂರ ಓಡಿ ಬಂದು ಎಸೆತಗಳ ಹಾಕುವುದನ್ನು ನೋಡಿದ್ದೇವೆ. ವಿಘ್ನೇಶ್ ಈ ಮಾದರಿಯನ್ನು ಮುರಿದರು. ಮೊದಲಿಗೆ ವೇಗದ ಬೌಲರ್ ಆಗುವ ಯತ್ನದಲ್ಲಿ ಇದ್ದ ಅವರು ಆಮೇಲೆ ಈ ಶೈಲಿಗೆ ಬದಲಾದದ್ದೇ ಇಂತಹ ಬಗೆಯಲ್ಲಿ ಬೌಲಿಂಗ್ ಮಾಡಲು ಕಾರಣ. ಹೀಗೆ ಜೋರಾಗಿ ಓಡಿಬಂದು ನಿಧಾನವಾಗಿ ಎಸೆತವನ್ನು ಹಾಕುವುದರ ಜೊತೆಗೆ ಅಧಿಕೃತ ಲೆಗ್‌ಸ್ಪಿನ್ ಎಸೆತಗಳನ್ನೂ ಅವರು ಪ್ರಯೋಗಿಸಬಲ್ಲರು. ಸಾಮಾನ್ಯವಾಗಿ ಬಲಗೈ ಬೌಲರ್‌ಗಳು ಹಾಕಿದಾಗ ಅದನ್ನು ಲೆಗ್‌ಸ್ಪಿನ್ ಎನ್ನುತ್ತೇವೆ. ಎಡಗೈ ಬೌಲರ್‌ಗಳ ವಿಷಯದಲ್ಲಿ ಅದು 'ಚೈನಾಮನ್'. ಗೂಗ್ಲಿ ಹಾಕುವುದರಲ್ಲೂ ಕೈಪಳಗಿಸಿಕೊಂಡಿರುವ ವಿಘ್ನೇಶ್, ಎಸೆತಗಳ ವೇಗ ಹಾಗೂ ತಿರುವುಗಳಲ್ಲಿ ಮಾಡುವ ವ್ಯತ್ಯಾಸ ಬ್ಯಾಟ್ಸ್‌ಮನ್‌ಗಳಿಗೆ ಚಳ್ಳೆಹಣ್ಣು ತಿನ್ನಿಸಬಲ್ಲದು ಎನ್ನುವುದನ್ನು ಮುಂಬೈ ಇಂಡಿಯನ್ಸ್ ಪಾಳಯದ ಅನೇಕರು ಅನುಭವಿಸಿದ್ದಾರೆ.

ನೆಟ್ಸ್‌ನಲ್ಲಿ ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯ, ತಿಲಕ್ ವರ್ಮಾ ಕೂಡ ವಿಘ್ನೇಶ್ ಎಸೆತಗಳ ವೈವಿಧ್ಯ ಕಂಡು ದಂಗಾದವರೇ. ಅಲ್ಲಿ ಈ ಹುಡುಗನ ಮೇಲೆ ಭರವಸೆ ಮೂಡಿದ್ದರಿಂದಲೇ ಮೊದಲ ಪಂದ್ಯದಲ್ಲಿ ಆಡುವ ಅವಕಾಶವನ್ನು ನಾಯಕ ಸೂರ್ಯಕುಮಾರ್ ಯಾದವ್ ನೀಡಿದ್ದು; ಅದೂ ಇಂಪ್ಯಾಕ್ಟ್ ಪ್ಲೇಯರ್ ಆಗಿ.

ವಿಘ್ನೇಶ್ 11 ವರ್ಷದ ಬಾಲಕನಾಗಿದ್ದಾಗ ಅವನಿಗೆ ಸ್ಪಿನ್ ಬೌಲಿಂಗ್‌ನ ಮೂಲ ಪಾಠಗಳನ್ನು ಕಲಿಸಿದವರು ವಿಜಯನ್. ಅವರು ಬಹಳ ಹಿಂದೆ ವಾಸುದೇವ ಜಗನ್ನಾಥ ಪರಾಂಜಪೆ ಅವರಿಗೆ ತರಬೇತಿ ನೀಡುವಲ್ಲಿ ಸಹಾಯಕರಾಗಿದ್ದವರು. ಸ್ಪಿನ್ ಬೌಲಿಂಗ್ ಮೂಲ ತತ್ವಗಳನ್ನು ಹೇಳಿಕೊಡುವುದರಲ್ಲಿ ವಾಸುದೇವ ನಿಷ್ಣಾತರು. ಅವರಿಂದ ಕಲಿತಿದ್ದ ವಿದ್ಯೆಯನ್ನೇ ವಿಜಯನ್ ತಮ್ಮ ಗರಡಿಯ ಹುಡುಗನಿಗೆ ಧಾರೆ ಎರೆದರು.

ವೇಗದ ಬೌಲರ್ ಆಗಬೇಕು ಎಂದು ಮೊದಲು ಹಂಬಲಿಸಿದ್ದ ವಿಘ್ನೇಶ್ ಕ್ರಮೇಣ ಸ್ಪಿನ್ ಬೌಲಿಂಗ್‌ಗೆ ಚುಟುಕು ಕ್ರಿಕೆಟ್‌ನಲ್ಲಿ ಭವಿಷ್ಯವಿದೆ ಎನ್ನುವುದನ್ನು ಅರಿತರು. ಅವರು ಈ ಬದಲಾವಣೆ ಬಯಸಿದ ಕಾಲಘಟ್ಟದಲ್ಲಿ ಗೂಗ್ಲಿ ಎಂದರೆ ಏನು ಎನ್ನುವ ಅರಿವು ಇರಲಿಲ್ಲ. ಲೆಗ್ ಬ್ರೇಕ್ ಹಾಕುವುದು ಹೇಗೆ ಎಂಬ ಬಗೆಗೂ ಜಿಜ್ಞಾಸೆ ಇತ್ತು. ಅವನ್ನೆಲ್ಲ ಹತ್ತು ದಿನಗಳ ಒಳಗೆ ಕಲಿಸಿ ಕೊಟ್ಟವರು ವಿಜಯನ್.

ತಮ್ಮಿಂದ ಮೂಲ ಪಾಠಗಳನ್ನು ಹೇಳಿಸಿಕೊಂಡ ವಿಘ್ನೇಶ್ ಈ ಸಲ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ 30 ಲಕ್ಷ ರೂಪಾಯಿ ಮೌಲ್ಯಕ್ಕೆ ಹರಾಜಾದಾಗಲೇ ಅವರಿಗೆ ಖುಷಿ ಆಗಿತ್ತು. ವಿಘ್ನೇಶ್‌ಗೆ ಆಡಲು ಒಂದು ಅವಕಾಶ ಸಿಕ್ಕರೆ ಸಾಕು ಎಂದು ಕಾಯುತ್ತಿದ್ದವರಲ್ಲಿ ವಿಜಯನ್ ಅವರೂ ಒಬ್ಬರು. ಅದರಲ್ಲೂ ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಬೌಲಿಂಗ್ ಮಾಡಲು ಬುಲಾವು ಸಿಗುವುದು ಎಂತಹ ಸ್ಪಿನ್ನರ್‌ಗೂ ಸ್ವರ್ಗಸದೃಶ ಅನುಭವ. ಅದು ಆಗಲಿ ಎಂದೇ ಈ ಕೋಚ್ ಪ್ರಾರ್ಥಿಸಿದ್ದರು. ಯಾಕೆಂದರೆ, ಚೆನ್ನೈನ ಪಿಚ್‌ನಲ್ಲಿ ಸ್ಪಿನ್ನರ್‌ಗಳಿಗೆ ಸಾಕಷ್ಟು ನೆರವು ಸಿಗುತ್ತದೆ. ವಿಘ್ನೇಶ್ ತಮ್ಮ ಕೈಗೆ ನಾಯಕ ಚೆಂಡು ಕೊಟ್ಟು, 'ವಿಕೆಟ್ ಕಿತ್ತು ತೋರಿಸು' ಎಂದು ಕೊಟ್ಟ ಆದೇಶವನ್ನು ಕಣ್ಣಿಗೆ ಒತ್ತಿಕೊಂಡರು. ವೇಗವಾಗಿ ಅರ್ಧಶತಕ ಹೊಡೆದಿದ್ದ ಋತುರಾಜ್ ಗಾಯಕ್ವಾಡ್ ಅವರನ್ನು ಮೊದಲು ಕ್ಯಾಚ್ ಕೊಡುವಂತೆ ಪ್ರೇರೇಪಿಸಿದರು. ಲೀಲಾಜಾಲವಾಗಿ ಸಿಕ್ಸರ್ ಹೊಡೆಯುತ್ತಿದ್ದ ಋತುರಾಜ್, ಈ ಹುಡುಗನ ಲೆಂಗ್ತ್ ಅಂದಾಜು ಮಾಡುವಲ್ಲಿ ಎಡವಿದರು. ಅಷ್ಟೇ ಅಲ್ಲ, ಚೆಂಡು ಬಂದ ಗತಿಯ ಲೆಕ್ಕಾಚಾರ ಕೂಡ ಅವರಿಗೆ ಕೈಕೊಟ್ಟಿತು. ಮುಂದೆ ಶಿವಂ ದುಬೆ, ದೀಪಕ್ ಹೂಡಾ ವಿಕೆಟ್‌ಗಳನ್ನು ಪಡೆದದ್ದೂ ಅವರು ಕ್ಯಾಚ್ ನೀಡುವಂತೆ ಕರಾಮತ್ತು ತೋರುವ ಮೂಲಕ.




ಸೂರ್ಯಕುಮಾರ್ ಶಹಬ್ಬಾಸ್‌ಗಿರಿ

ಹೊಸ ಸ್ಪಿನ್ನರ್ ಬಂದಾಗ ಅನುಭವಿ ಬ್ಯಾಟ್ಸ್‌ಮನ್‌ಗಳು ಸಾಮಾನ್ಯವಾಗಿ ಆಕ್ರಮಣಕಾರಿ ತಂತ್ರವನ್ನು ಬಿಟ್ಟುಕೊಡುವುದಿಲ್ಲ. ಅದನ್ನು ತಮಗೆ ವಿಕೆಟ್ ದೊರೆಯುವ ಅವಕಾಶವನ್ನಾಗಿ ಪರಿವರ್ತಿಸಿಕೊಳ್ಳುವ ಚಾಕಚಕ್ಯತೆಯನ್ನು ವಿಘ್ನೇಶ್ ಮೊದಲ ಪಂದ್ಯದಲ್ಲಿಯೇ ತೋರಿಸಿದರು. ಮಹೇಂದ್ರ ಸಿಂಗ್ ಧೋನಿ ಈ ಹುಡುಗನ ಬಳಿಗೆ ಬಂದು, 'ನಿನಗೆ ಎಷ್ಟು ವಯಸ್ಸು' ಎಂದು ಕೇಳಿದರು. 'ಹೀಗೆಯೇ ಚೆನ್ನಾಗಿ ಆಡು' ಎಂದು ಹಾರೈಸಿದರು. ಅದಕ್ಕೂ ಮೊದಲು ಪಂದ್ಯದ ನಡುವೆಯೇ ವಿಘ್ನೇಶ್ ಅವರ ಕಾಲಿಗೆ ಬಿದ್ದಿದ್ದನ್ನು ನೋಡಿ ರೋಹಿತ್, 'ಮೊದಲು ಬೌಲಿಂಗ್ ಮಾಡು ಮಾರಾಯ' ಎಂಬರ್ಥದಲ್ಲಿ ಪ್ರತಿಕ್ರಿಯಿಸಿದ್ದೂ ಸುದ್ದಿಯಾಯಿತು. ಅಭಿಮಾನದ ಎದುರು ಇಂತಹ ತಾಕೀತುಗಳು ಕೇಳುವುದಿಲ್ಲ.

ಚೆನ್ನೈ ಎದುರಿನ ಮೊದಲ ಪಂದ್ಯದಲ್ಲಿ ಮುಂಬೈ ತಂಡವು ಸೋಲುಂಡಿತು. ಆದರೆ, ಡ್ರೆಸ್ಸಿಂಗ್ ರೂಮ್‌ನಲ್ಲಿ ಆ ದಿನದ ಉತ್ತಮ ಪ್ರದರ್ಶನ ನೀಡಿದ ಬೌಲರ್ ಎಂಬ ಗೌರವವನ್ನು ತಂಡದ ವ್ಯವಸ್ಥಾಪಕ ಸಮಿತಿಯು ಈ ಹುಡುಗನಿಗೆ ನೀಡಿತು.

ಮುಂಬೈ ತಂಡದ ಬೌಲಿಂಗ್ ಕೋಚ್ ಪಾರಸ್ ಮಹಾಂಬ್ರೆ ಈ ಪ್ರತಿಭಾವಂತನನ್ನು ಹುಡುಕಿ ಕರೆತಂದಿದ್ದು. ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಕೂಡ ಆಡದೇ ಇದ್ದ ವಿಘ್ನೇಶ್ ಚೆನ್ನೈ ಕ್ರಿಕೆಟ್ ಲೀಗ್ ತರಹದ ಟೂರ್ನಿಯಲ್ಲಿಯೂ ಹೆಚ್ಚೇನೂ ಗಮನಸೆಳೆದಿರಲಿಲ್ಲ. ಆದರೆ, ನೆಟ್ಸ್ ಬೌಲರ್ ಆಗಿ ಮಾಡುತ್ತಿದ್ದ ಪ್ರಯೋಗಗಳನ್ನು ಕಂಡು ಅವರು ತಂಡದೊಳಕ್ಕೆ ಬಿಟ್ಟುಕೊಂಡರು.

ದಕ್ಷಿಣ ಆಫ್ರಿಕಾದಲ್ಲಿ ರಶೀದ್ ಖಾನ್ ಅವರಂತಹ ಪ್ರತಿಭೆಗಳಿಂದ ಸ್ಪಿನ್ ಸಲಹೆಗಳನ್ನು ಪಡೆದು, ತರಬೇತಿಯನ್ನೂ ಪಡೆದುಕೊಂಡು ಬಂದಿರುವ ಕೇರಳದ ಹುಡುಗನ ವಯಸ್ಸು ಈಗ 24 ವರ್ಷ.

ಚುಟುಕು ಕ್ರಿಕೆಟ್‌ನಲ್ಲಿ ಬಲಗೈ ಸ್ಪಿನ್ನರ್‌ಗಳೆಲ್ಲ ಭವಿಷ್ಯಕ್ಕಾಗಿ ತಡಕಾಡುವ ಪರಿಸ್ಥಿತಿ ಇದೆ. ಇದ್ದುದರಲ್ಲಿ ನಿಧಾನ ಗತಿಯ ಎಡಗೈ ಸ್ಪಿನ್ನರ್‌ಗಳಿಗೇ ಉಳಿಗಾಲ. ಹೀಗಾಗಿ ಈ ಹೊಸ ಹುಡುಗನ ಚುರುಕುಮತಿ ಸದ್ಯಕ್ಕೆ ಬೆರಗಿನಂತೆ ಕಾಣುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in